ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ, ಶಿವಮೊಗ್ಗ ಜಿಲ್ಲೆ
OFFICE OF THE DEPUTY COMMISSIONER & DISTRICT MAGISTRATE, SHIVAMOGGA DISTRICT
ದೂರವಾಣಿ/PHONE : 08182-271101/221010/221100. ಫ್ಯಾಕ್ಸ್/FAX : 277082.ಇ-ಮೇಲ್/E-MAIL:deo.shimoga@gmail.com

No.SMGDC.MAG(1) CR/Covid-19/01/2021-22 ದಿನಾಂಕ: 12-08-2021

ವಿಷಯ:- ಕೋವಿಡ್-19 ಕೊರೋನ ಸೋಂಕು 3ನೇ ಅಲೆ ನಿಯಂತ್ರಿಸುವ ಸಂಬಂಧ ಜಿಲ್ಲೆಯಾದ್ಯಂತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ತಿದ್ದುಪಡಿ ಆದೇಶ ಹೊರಡಿಸುವ ಕುರಿತು.

ಉಲ್ಲೇಖ
1. ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರರವರ ಅಧ್ಯಕ್ಷತೆಯಲ್ಲಿ ದಿನಾಂಕ:31-07-2021ರಂದು ಜರುಗಿದ ವಿಡಿಯೋ ಸಂವಾದ ಸಭೆಯಲ್ಲಿ ನೀಡಿರುವ ನಿರ್ದೇಶನಗಳಂತೆ.
2. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಧ್ಯಕ್ಷರು ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಕಾರ್ಯಕಾರಿ ಸಮಿತಿ, ಬೆಂಗಳೂರು ರವರ ಆದೇಶ ಸಂಖ್ಯೆ ಆರ್ ಡಿ 158 ಟಿಎನ್ಆರ್ 2020 ದಿನಾಂಕ: 19-06-2021, 03-07-2021 ಮತ್ತು 18-07-2021.
3. ಸರ್ಕಾರದ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಹಾಗೂ ಸದಸ್ಯ ಕಾರ್ಯದರ್ಶಿಗಳು, ವಿಪತ್ತು ನಿರ್ವಹಣಾ ಪ್ರಾಧಿಕಾರ ಕಾರ್ಯಕಾರಿ ಸಮಿತಿ, ಬೆಂಗಳೂರುರವರ ಪರಿಷ್ಕೃತ ಆದೇಶ ಸಂಖ್ಯೆ ಆರ್ ಡಿ 158 ಟಿಎನ್ಆರ್ 2020 ದಿನಾಂಕ:08-05-2021, 09-05-2021, 22-06-2021, 25-06-2021 ಮತ್ತು 24-07-2021.
4. ಈ ಕಛೇರಿಯ ಸಮ ಸಂಖ್ಯೆಆದೇಶ ದಿನಾಂಕ: 03-08-2021.

*****

## ತಿದ್ದುಪಡಿ ಆದೇಶ

ಪ್ರಸ್ತುತ, ಕೆಲವು ನೆರೆಹೊರೆ ರಾಜ್ಯಗಳಲ್ಲಿ ಕೋವಿಡ್-19ರ ಪ್ರಕರಣಗಳು ಹೆಚ್ಚಾಗುತ್ತಿರುವುದರಿಂದ ಶಿವಮೊಗ್ಗ ಜಿಲ್ಲಾ ವ್ಯಾಪ್ತಿಯಲ್ಲಿ ಮುಂದೆ ಸಂಭವಿಸಬಹುದಾದ ಕೋವಿಡ್-19 ರ ಅಲೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಈ ಕಛೇರಿಯ ಉಲ್ಲೇಖ (4) ರ ಆದೇಶದಲ್ಲಿ ಕೋವಿಡ್ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಆದೇಶದಲ್ಲಿನ ಕೆಲವೊಂದು ಮಾರ್ಗಸೂಚಿ ಕುರಿತು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ಆದೇಶಿಸಿದೆ.

ಈ ಕಛೇರಿಯ ಉಲ್ಲೇಖ (4) ರ ಆದೇಶ ಭಾಗದ ಕ್ರಮ ಸಂಖ್ಯೆ (3) ಮತ್ತು (4) ರಲ್ಲಿ "RT-PCR ನೆಗೆಟಿವ್" ಎಂಬ ಪದಗಳ ಮುಂದೆ **"72 ಗಂಟೆಯೊಳಗೆ ಮಾಡಿಸಿದ RT-PCR ನೆಗೆಟಿವ್ ವರದಿ / RAT ನೆಗೆಟಿವ್ ವರದಿ/ ಕೋವಿಡ್-2 ನೇ ಲಸಿಕೆ ಪಡೆದ ಪ್ರಮಾಣ ಪತ್ರವನ್ನು ಹೊಂದಿರುವುದನ್ನು ಕಡ್ಡಾಯಗೊಳಿಸಲಾಗಿದೆ"** ಎಂದು ಸೇರಿಸಿ ಓದಿಕೊಳ್ಳತಕ್ಕದ್ದು. ಈ ತಿದ್ದುಪಡಿ ಆದೇಶವನ್ನು ದಿನಾಂಕ:12-08-2021ರಂದು ನನ್ನ ಸಹಿ ಮತ್ತು ಮೊಹರಿನೊಂದಿಗೆ ಹೊರಡಿಸಲಾಗಿದೆ.

K.B. [signature]

ಅಧ್ಯಕ್ಷರು, ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರ ಹಾಗೂ
ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ,
ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.

<u>ಪ್ರತಿಯನ್ನುಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ :-</u>

1. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
2. ಪೊಲೀಸ್ ಅಧೀಕ್ಷಕರು, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ.
3. ಮುಖ್ಯ ಕಾರ್ಯನಿರ್ವಾಹಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಶಿವಮೊಗ್ಗ.
4. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಶಿವಮೊಗ್ಗ.
5. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಶಿವಮೊಗ್ಗ.
6. ಅಬಕಾರಿ ಉಪಆಯುಕ್ತರು, ಅಬಕಾರಿ ಇಲಾಖೆ, ಶಿವಮೊಗ್ಗ.
7. ಉಪ ವಿಭಾಗಾಧಿಕಾರಿಗಳು, ಶಿವಮೊಗ್ಗ/ ಸಾಗರ ಉಪವಿಭಾಗ.
8. ಆಯುಕ್ತರು, ಮಹಾನಗರಪಾಲಿಕೆ, ಶಿವಮೊಗ್ಗ.
9. ಆಯುಕ್ತರು, ನಗರಸಭೆ, ಭದ್ರಾವತಿ/ಸಾಗರ.
10. ಕಾರ್ಯನಿರ್ವಾಹಕಅಧಿಕಾರಿಗಳು, ಶಿವಮೊಗ್ಗ / ಭದ್ರಾವತಿ / ತೀರ್ಥಹಳ್ಳಿ / ಸಾಗರ / ಸೊರಬ / ಶಿಕಾರಿಪುರ/ ಹೊಸನಗರ.
11. ಹಿರಿಯ ಸಹಾಯಕ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಶಿವಮೊಗ್ಗ ರವರಿಗೆ ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ ಕಳುಹಿಸುತ್ತಾ ಸದರಿ ಆದೇಶವನ್ನು ಸಾರ್ವಜನಿಕರ ಮಾಹಿತಿಗಾಗಿ ಎಲ್ಲಾ ದಿನಪತ್ರಿಕೆಗಳಲ್ಲಿ ಉಚಿತವಾಗಿ ಪ್ರಕಟಿಸಲು ಸೂಚಿಸಿದೆ.
12. ತಹಶೀಲ್ದಾರ್, ಶಿವಮೊಗ್ಗ/ಭದ್ರಾವತಿ/ತೀರ್ಥಹಳ್ಳಿ /ಸಾಗರ/ಸೊರಬ/ಶಿಕಾರಿಪುರ/ಹೊಸನಗರ.
13. ಮುಖ್ಯಾಧಿಕಾರಿ, ಪುರಸಭೆ, ಶಿಕಾರಿಪುರ.
14. ಮುಖ್ಯಾಧಿಕಾರಿ, ಪಟ್ಟಣಪಂಚಾಯಿತಿ, ತೀರ್ಥಹಳ್ಳಿ, ಶಿರಾಳಕೊಪ್ಪ, ಹೊಸನಗರ, ಆನವಟ್ಟಿ, ಹೊಳೆಹೊನ್ನೂರು.